ತೋಟಗಾರಿಕಾ ಫಾರ್ಮ್‌ಗಳು.

4228(4561) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ತೋಟಗಾರಿಕಾ ಫಾರ್ಮ್‌ಗಳ ಸಂಖ್ಯೆ ಎಷ್ಟು?

ಆ) ಈ ಫಾರ್ಮ್‌ಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು?

ಇ) ಈ ಫಾರ್ಮ್‌ಗಳಿಗೆ ಸರ್ಕಾರ ವಾರ್ಷಿಕ ವೆಚ್ಚ ಮಾಡುವ ಹಣ ಎಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

ಅ) 415.

ಆ) 1999-2000ನೇ ಸಾಲಿನ ಒಟ್ಟು ಆದಾಯ ರೂ. 5.60 ಕೋಟಿ.

ಇ) 1999-2000ನೇ ಸಾಲಿನ ಒಟ್ಟು ವೆಚ್ಚ ರೂ. 13.22 ಕೋಟಿ.

ಜಿಲ್ಲಾ ಕೇಂದ್ರ ಕಛೇರಿಗಳು.

4229(4563) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನೂತನವಾಗಿ ರಚನೆಯಾಗಿರುವ ಏಳು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಗಳಿಗೆ ನಿವೇಶನಗಳನ್ನು ಗುರುತಿಸಲಾಗಿದೆಯೇ? (ಜಿಲ್ಲಾವಾರು ವಿವರ ನೀಡಿ)

2. ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಇತರ ಆಡಳಿತ ಕಛೇರಿಗಳ ಕಟ್ಟಡಗಳಿಗಾಗಿ ಸರ್ಕಾರ 1999-2000, 2000-2001ರ ಸಾಲಿನಲ್ಲಿ ಬಿಡುಗಡೆಗೊಳಿಸಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡಿ)

3. ಹೊಸ ಜಿಲ್ಲೆಗಳಿಗೆ ಜಿಲ್ಲಾ ಕೇಂದ್ರ ಆಡಳಿತ ಕಛೇರಿ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :—

1. ಬಾಗಲಕೋಟ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣಕ್ಕಾಗಿ ನಿವೇಶನವನ್ನು ಗುರುತಿಸಲಾಗಿದೆ. ಉಳಿದ ಹೊಸ ಜಿಲ್ಲೆಗಳಲ್ಲಿ ನಿವೇಶನ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.

2. 1999-2000 ಹಾಗೂ 2000-2001ರಲ್ಲಿ ಕ್ರಮವಾಗಿ ದಾವಣಗೆರೆ ಜಿಲ್ಲೆಗೆ 70.00 ಲಕ್ಷ ರೂ. ಹಾಗೂ 30.00ಲಕ್ಷ ರೂ.ಗಳನ್ನು ಉಡುಪಿ ಜಿಲ್ಲೆಗೆ 72.00 ಲಕ್ಷ ಹಾಗೂ 30 ಲಕ್ಷ ರೂ.ಗಳನ್ನು ಚಾಮರಾಜನಗರ ಜಿಲ್ಲೆಗೆ 72.00 ಲಕ್ಷ ರೂ. ಹಾಗೂ 30.00 ಲಕ್ಷ ರೂ.ಗಳನ್ನು ಗದಗ ಜಿಲ್ಲೆಗೆ 175.5 ಲಕ್ಷ ರೂ.ಗಳು ಹಾಗೂ 42.00 ಲಕ್ಷ ರೂ.ಗಳನ್ನು ಹಾವೇರಿ ಜಿಲ್ಲೆಗೆ 258.49 ಲಕ್ಷ ರೂ.ಗಳು ಹಾಗೂ 42.00 ಲಕ್ಷ ರೂ.ಗಳನ್ನು ಮತ್ತು ಕೊಪ್ಪಳ ಜಿಲ್ಲೆಗೆ 1999-2000ರಲ್ಲಿ 25.00 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಈ ಎರಡು ವರ್ಷಗಳಲ್ಲಿ ಬಾಗಲಕೋಟ ಜಿಲ್ಲೆಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

3. ಎಲ್ಲ ಜಿಲ್ಲಾ ಕಛೇರಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಎಳು ಹೊಸ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕಛೇರಿ ಸಂಕೀರ್ಣಗಳನ್ನು ನಿರ್ಮಿಸಲು ಹುಡ್ಕೊ ಸಂಸ್ಥೆಯಿಂದ ಸಾಲವನ್ನು ಪಡೆಯಲಾಗುತ್ತಿದೆ. ಈ ಸಂಕೀರ್ಣಗಳು ಜಿಲ್ಲೆಯಲ್ಲಿನ ಕಛೇರಿಗಳ ಸಂಕೀರ್ಣಗಳಾಗಿ ಕಾರ್ಯನಿರ್ವಹಿಸುತ್ತವೆ. ಸಾಲ ಮಂಜೂರಾದ ಕೂಡಲೇ ಈ ಜಿಲ್ಲಾ ಕಛೇರಿ ಸಂಕೀರ್ಣಗಳ ನಿರ್ಮಾಣ ಪ್ರಾರಂಭವಾಗುತ್ತದೆ.

ಬಗರ್‌ಹುಕುಂ ಸಾಗುವಳಿ ಚೀಟಿ ವಿತರಣೆ.

4231(4601) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಗರ್ ಹುಕುಂ ಸಾಗುವಳಿ ಚೀಟಿಗಳನ್ನು ನೀಡುವ ಕಾರ್ಯಕ್ರಮದಲ್ಲಿ ವಿಲೇವಾರಿ ಆಗದೆ ಇರುವ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ಕೊಡುವುದು)

ಆ) ಇವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಏನಾದರೂ ಕಾರ್ಯಕ್ರಮವನ್ನು ಯೋಜಿಸಿದೆಯೇ? (ವಿವರಗಳನ್ನು ಕೊಡುವುದು)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

ಅ) 10.82. ಲಕ್ಷ
ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು.

ಅರ್ಜಿಗಳ ವಿಲೇವಾರಿಗಾಗಿ ತಾಲ್ಲೂಕುವಾರು ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗುತ್ತಿದ್ದು ನಿಯಮಾನುಸಾರ ಪರಿಶೀಲಿಸಿ ಶೀಘ್ರ ವಿಲೇಮಾಡಲು ಸೂಚನೆಗಳನ್ನು ನೀಡಲಾಗಿದೆ.